ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./23/2021-22

ದಿನಾಂಕ: 16.05.2022

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನಾ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2ಎ) ರಡಿಯಲ್ಲಿ)

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಸಬಾ ಹೋಬಳಿ, ಆಲಪ್ಪನಹಳ್ಳಿ ಗ್ರಾಮದ ಸ. ನಂ. 1/6 ರಲ್ಲಿನ 01 ಗುಂಟೆ, ಸ.ನಂ. 1/12 ರಲ್ಲಿನ 05 1/2 ಗುಂಟೆ, ಸ.ನಂ. 1/13 ರಲ್ಲಿನ 05 1/2 ಗುಂಟೆ, ಸ.ನಂ. 96/1 ರಲ್ಲಿನ 01 ಎಕರೆ 11 1/2 ಗುಂಟೆ, ಸ.ನಂ. 100/2 ರಲ್ಲಿನ 08 ಗುಂಟೆ, ಸ.ನಂ. 101/1 ರಲ್ಲಿನ 09 ಗುಂಟೆ, ಸ.ನಂ. 101/2 ರಲ್ಲಿನ 05 ಗುಂಟೆ, ಸ.ನಂ. 102/2 ರಲ್ಲಿನ 02 ಗುಂಟೆ ಮತ್ತು ಶಂಕಣೀಪುರ ಗ್ರಾಮದ ಸ.ನಂ. 25 ರಲ್ಲಿನ 09 ಗುಂಟೆ, ಸ.ನಂ. 26/4 ರಲ್ಲಿನ 37 1/2 ಗುಂಟೆ, ಸ.ನಂ. 26/12 ರಲ್ಲಿನ 01 1/2 ಗುಂಟೆ ಸ.ನಂ. 26/13 ರಲ್ಲಿನ 13 1/2 ಗುಂಟೆ, ಸ.ನಂ. 26/15 ರಲ್ಲಿನ 17 ಗುಂಟೆ, ಸ.ನಂ. 32/2 ರಲ್ಲಿನ 37 ಗುಂಟೆ, ಸ.ನಂ. 32/3 ರಲ್ಲಿನ 09 1/4 ಗುಂಟೆ, ಸ.ನಂ. 32/4 ರಲ್ಲಿನ 37 ಗುಂಟೆ, ಸ.ನಂ. 32/6 ರಲ್ಲಿನ 09 1/4 ಗುಂಟೆ, ಸ.ನಂ. 32/7 ರಲ್ಲಿನ 09 1/4 ಗುಂಟೆ, ಸ.ನಂ. 32/8 ರಲ್ಲಿನ 09 1/4 ಗುಂಟೆ, ಸ.ನಂ. 34/2 ರಲ್ಲಿನ 09 ಗುಂಟೆ, ಸ.ನಂ. 34/3 ರಲ್ಲಿನ 09 3/4 ಗುಂಟೆ, ಸ.ನಂ. 34/4 ರಲ್ಲಿನ 01 ಎಕರೆ 04 ಗುಂಟೆ, ಸ.ನಂ. 34/5 ರಲ್ಲಿನ 38 ಗುಂಟೆ, ಸ.ನಂ 34/8 ರಲ್ಲಿನ 03 1/4 ಗುಂಟೆ ಒಟ್ಟು 09 ಎಕರೆ 21 ಗುಂಟೆ (10 3/4 ಗುಂಟೆ 'ಬಿ' ಖರಾಬನ್ನು ಹೊರತು ಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1. **ಅರ್ಜಿದಾರರಾದ ಶ್ರೀ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ ಮತ್ತು ಶ್ರೀಮತಿ ಕೀರ್ತಿ ಮುಸನೂರಿ ಕೋಂ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ,** ಮೆ॥ ಎಂ.1 ಪ್ರಾಪರ್ಟೀಸ್ **ಇವರ** ಮನವಿ ಪತ್ರ ದಿನಾಂಕ: 11.11.2021.
2. ದಿನಾಂಕ: 17.12.2021 ರಂದು ನಡೆದ ಪ್ರಾಧಿಕಾರದ 89 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 19 ರ ನಿರ್ಣಯ.
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 19.01.2022.
4. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಬಗ್ಗೆ ದಿನಾಂಕ: 07.04.2022 ರ ಮನವಿಯೊಂದಿಗೆ, ಕೆನರಾ ಬ್ಯಾಂಕ್, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ಶಾಖೆ, ಡಿ. ಡಿ. ನಂ. 711047, ಡಿ.ಡಿ. ದಿನಾಂಕ: 07.04.2022, ರೂ. 37,04,300/-.

5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಬಳಹಳ್ಳಿ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ಹಾಗೂ ಉಪನೋಂದಣಾಧಿಕಾರಿಗಳು, ಹೊಸಕೋಟೆ ರವರಿಗೆ ಪರಿತ್ಯಜನಾ ಪತ್ರವನ್ನು ನೋಂದಾಯಿಸಲು ತಿಳಿಸಲಾದ ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: 30.04.2022.
6. ದಿನಾಂಕ: 12.05.2022 ರಂದು ಅರ್ಜಿದಾರರು ನಾಗರೀಕ ಸೌಲಭ್ಯ ನಿವೇಶನ (ಸಿ.ಎ) ವನ್ನು ಈ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ ಮೂಲ ಪ್ರತಿಯನ್ನು ಸಲ್ಲಿಸಿರುವ ಬಗ್ಗೆ (ದಿನಾಂಕ: 12.05.2022).
7. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಬಳಹಳ್ಳಿ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ರವರ ಪತ್ರ ಸಂ: ಕುಂ.ಗ್ರಾ.ಪಂ/24/2022–23, ದಿನಾಂಕ: 12.05.2022.
8. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2ಎ) ಮತ್ತು 17(2ಬಿ) ರಲ್ಲಿನ ಅವಕಾಶದನ್ವಯ.

ಪ್ರಸ್ತಾವನೆ:–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಅರ್ಜಿದಾರರಾದ **ಶ್ರೀ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ ಮತ್ತು ಶ್ರೀಮತಿ ಕೀರ್ತಿ ಮುಸನೂರಿ ಕೋಂ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ,** ಮೆ॥ ಎಂ.1 ಪ್ರಾಪರ್ಟೀಸ್, **ಇವರು** ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಆಲಪ್ಪನಹಳ್ಳಿ ಗ್ರಾಮದ ಸ. ನಂ. 1/6 ರಲ್ಲಿನ 01 ಗುಂಟೆ, ಸ.ನಂ. 1/12 ರಲ್ಲಿನ 05 1/2 ಗುಂಟೆ, ಸ.ನಂ. 1/13 ರಲ್ಲಿನ 05 1/2 ಗುಂಟೆ, ಸ.ನಂ. 96/1 ರಲ್ಲಿನ 01 ಎಕರೆ 11 1/2 ಗುಂಟೆ, ಸ.ನಂ. 100/2 ರಲ್ಲಿನ 08 ಗುಂಟೆ, ಸ.ನಂ. 101/1 ರಲ್ಲಿನ 09 ಗುಂಟೆ, ಸ.ನಂ. 101/2 ರಲ್ಲಿನ 05 ಗುಂಟೆ, ಸ.ನಂ. 102/2 ರಲ್ಲಿನ 02 ಗುಂಟೆ ಮತ್ತು ಶಂಕಣೀಪುರ ಗ್ರಾಮದ ಸ.ನಂ. 25 ರಲ್ಲಿನ 09 ಗುಂಟೆ, ಸ.ನಂ. 26/4 ರಲ್ಲಿನ 37 1/2 ಗುಂಟೆ, ಸ.ನಂ. 26/12 ರಲ್ಲಿನ 01 1/2 ಗುಂಟೆ ಸ.ನಂ. 26/13 ರಲ್ಲಿನ 13 1/2 ಗುಂಟೆ, ಸ.ನಂ. 26/15 ರಲ್ಲಿನ 17 ಗುಂಟೆ, ಸ.ನಂ. 32/2 ರಲ್ಲಿನ 37 ಗುಂಟೆ, ಸ.ನಂ. 32/3 ರಲ್ಲಿನ 09 1/4 ಗುಂಟೆ, ಸ.ನಂ. 32/4 ರಲ್ಲಿನ 37 ಗುಂಟೆ, ಸ.ನಂ. 32/6 ರಲ್ಲಿನ 09 1/4 ಗುಂಟೆ, ಸ.ನಂ. 32/7 ರಲ್ಲಿನ 09 1/4 ಗುಂಟೆ, ಸ.ನಂ. 32/8 ರಲ್ಲಿನ 09 1/4 ಗುಂಟೆ, ಸ.ನಂ. 34/2 ರಲ್ಲಿನ 09 ಗುಂಟೆ, ಸ.ನಂ. 34/3 ರಲ್ಲಿನ 09 3/4 ಗುಂಟೆ, ಸ.ನಂ. 34/4 ರಲ್ಲಿನ 01 ಎಕರೆ 04 ಗುಂಟೆ, ಸ.ನಂ. 34/5 ರಲ್ಲಿನ 38 ಗುಂಟೆ, ಸ.ನಂ 34/8 ರಲ್ಲಿನ 03 1/4 ಗುಂಟೆ ಒಟ್ಟು 09 ಎಕರೆ 21 ಗುಂಟೆ (10 3/4 ಗುಂಟೆ 'ಬಿ' ಖರಾಬನ್ನು ಹೊರತು ಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ **ವಸತಿ** ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ಜಮೀನುಗಳು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ವಸತಿ ವಲಯ ಹಾಗೂ ಹಾಲಿ ರಸ್ತೆಯನ್ನು 18 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಅದರಂತೆ ವಸತಿ ಉದ್ದೇಶಕ್ಕೆ ಕೆಲವು ನಿಬಂಧನೆ ಗೊಳಪಟ್ಟು ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿದ್ದು, ಪ್ರಸ್ತಾಪಿತ ಜಮೀನುಗಳನ್ನು ಜಿಲ್ಲಾಧಿಕಾರಿಗಳು ವಸತಿ ಉದ್ದೇಶಕ್ಕೆ ಈ ಕೆಳಕಂಡಂತೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

| ಕ್ರ. ಸಂ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ ಎ–ಗುಂ | 'ಬಿ' ಖರಾಬು | ಭೂ ಪರಿವರ್ತನಾ ಆದೇಶದ ಸಂಖ್ಯೆ |
|---|---|---|---|---|---|
| 1 | ಆಲಪ್ಪನಹಳ್ಳಿ | 1/6 | 00–01 | – | 200396, ದಿನಾಂಕ: 12.01.2021 |
| 2 | | 1/12 | 00–05 1/2 | – | 200395, ದಿನಾಂಕ: 12.01.2021 |
| 3 | | 1/13 | 00–05 1/2 | – | 200398, ದಿನಾಂಕ: 12.01.2021 |
| 4 | | 96/1 | 01–11 1/2 | – | 224331, ದಿನಾಂಕ: 28.07.2021 |
| 5 | | 100/2 | 00–08 | 0–03/4 | 273378, ದಿನಾಂಕ: 12.11.2021 |
| 6 | | 101/1 | 00–09 | – | 237384, ದಿನಾಂಕ: 05.08.2021 |
| 7 | | 101/2 | 00–05 | – | 200397, ದಿನಾಂಕ: 12.01.2021 |
| 8 | | 102/2 | 00–02 | – | 194970, ದಿನಾಂಕ: 30.11.2020 |

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./23/2021-22 ದಿನಾಂಕ: 16.05.2022

| | | | | | |
|---|---|---|---|---|---|
| 9 | ಶಂಕಣೀಪುರ | 25 | 00-09 | – | 224417, ದಿನಾಂಕ: 28.07.2021 |
| 10 | | 26/4 | 00-37 1/2 | 00-03 | 237381, ದಿನಾಂಕ: 05.08.2021 |
| 11 | | 26/12 | 00-01 1/2 | – | 194969, ದಿನಾಂಕ: 30.11.2020 |
| 12 | | 26/13 | 00-13 1/2 | 00-01 | 194966, ದಿನಾಂಕ: 30.11.2020 |
| 13 | | 26/15 | 00-17 | 00-01 | 49741, ದಿನಾಂಕ: 17.12.2019 |
| 14 | | 32/2 | 00-37 | – | LNDC10000556, ದಿನಾಂಕ: 29.10.2018 |
| 15 | | 32/3 | 00-09 1/4 | – | LNDC10000550, ದಿನಾಂಕ: 30.07.2018 |
| 16 | | 32/4 | 00-37 | – | LAND10010209, ದಿನಾಂಕ: 12.03.2019 |
| 17 | | 32/6 | 00-09 1/4 | – | LNDC10000552, ದಿನಾಂಕ: 30.07.2018 |
| 18 | | 32/7 | 00-09 1/4 | – | LNDC 10000559, ದಿನಾಂಕ: 19.09.2018 |
| 19 | | 32/8 | 00-09 1/4 | – | 194972, ದಿನಾಂಕ: 05.12.2020 |
| 20 | | 34/2 | 00-09 | – | LAND10019778,ದಿನಾಂಕ: 24.06.2019 |
| 21 | | 34/3 | 00-09 3/4 | – | 187512, ದಿನಾಂಕ: 13.10.2020 |
| 22 | | 34/4 | 01-04 | 00-03 | LAND10019766, ದಿನಾಂಕ: 21.06.2019 |
| 23 | | 34/5 | 00-38 | 00-01 | LAND10019776, ದಿನಾಂಕ: 21.06.2019 |
| 24 | | 34/8 | 00-03 1/4 | 00-01 | 187515, ದಿನಾಂಕ: 13.10.2020 |
| ಒಟ್ಟು | | | 09-21 | 00-10 3/4 | |

ಉಲ್ಲೇಖ (02) ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ.

ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಉಲ್ಲೇಖ (3) ರಲ್ಲಿ ನಿಗದಿತ ಶುಲ್ಕವನ್ನು ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿದ್ದು, ಅದರಂತೆ ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕ **ರೂ. 37,04,300/– ಗಳನ್ನು** ಡಿಡಿ ಮೂಲಕ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಅನುಮೋದನೆ ನೀಡುವಂತೆ ಕೋರಿ ಸಲ್ಲಿಸಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿ ವಸತಿಗಾಗಿ 18863.58 ಚ. ಮೀ. (ಶೇ 48.94); ವಾಣಿಜ್ಯಕ್ಕಾಗಿ 182.65 ಚ.ಮೀ. (ಶೇ. 00.47); ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 4294.32 ಚ. ಮೀ. (ಶೇ 11.14): ನಾಗರೀಕ ಸೌಲಭ್ಯ (ಸಿ.ಎ) ನಿವೇಶನಕ್ಕಾಗಿ 1947.77 ಚ.ಮೀ. (ಶೇ. 05.05) ಮತ್ತು ರಸ್ತೆಗಳಿಗಾಗಿ 13257.45 ಚ. ಮೀ. (ಶೇ 34.40) ವಿಸ್ತೀರ್ಣವನ್ನು ನಿಗದಿಪಡಿಸಲಾಗಿದ್ದು, ವಿನ್ಯಾಸದಲ್ಲಿ ಒಟ್ಟು 158 ವಸತಿ ನಿವೇಶನಗಳನ್ನು ಹಾಗೂ 01 ವಾಣಿಜ್ಯ ನಿವೇಶನವನ್ನು ಪ್ರಸ್ತಾಪಿಸಲಾಗಿದೆ. ಕೆಟಿಸಿಪಿ ಕಾಯ್ದೆ 2015 ರ ಕಲಂ 17(2ಎ) ರಂತೆ ಅಂತಿಮಗೊಳಿಸಲಾದ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿ ಕಾಯ್ದಿರಿಸಲಾದ ನಾಗರೀಕ ಸೌಲಭ್ಯ (ಸಿ.ಎ) ನಿವೇಶನವನ್ನು ಈ ಪ್ರಾಧಿಕಾರಕ್ಕೆ ಹಾಗೂ ಉದ್ಯಾನವನ ಮತ್ತು ಬಯಲು ಜಾಗ ಹಾಗೂ ರಸ್ತೆಗಳಿಗಾಗಿ ಕಾಯ್ದಿರಿಸಿದ ಜಾಗವನ್ನು **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಬಳಹಳ್ಳಿ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ರವರಿಗೆ** ಪುಕ್ಕಟೆಯಾಗಿ ಪರಿತ್ಯಜನಾ ಪತ್ರದ ಮುಖಾಂತರ ಹಸ್ತಾಂತರಿಸುವಂತೆ ತಿಳಿಸಿ ಅರ್ಜಿದಾರರಿಗೆ ಉಲ್ಲೇಖ (5) ರಲ್ಲಿ ತಿಳಿಸಲಾಗಿತ್ತು.

ಅದರಂತೆ, ಉಲ್ಲೇಖ (6) ರಲ್ಲಿ ಸಿ.ಎ. ನಿವೇಶನವನ್ನು ಪರಿತ್ಯಜನಾ ಪತ್ರದ ಮೂಲಕ ಈ ಕಛೇರಿಗೆ ಹಸ್ತಾಂತರಿಸಿರುವ ಮೂಲ ಪ್ರತಿಯನ್ನು ಹಾಗೂ ಉಲ್ಲೇಖ (7) ರಲ್ಲಿ ಉದ್ಯಾನವನ ಮತ್ತು ಬಯಲು ಜಾಗ ಹಾಗೂ ರಸ್ತೆ ಪ್ರದೇಶಗಳನ್ನು **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಬಳಹಳ್ಳಿ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು**

ರವರಿಗೆ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿದ್ದು, ಅದರ ದೃಢೀಕೃತ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಆದ್ದರಿಂದ, ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2ಎ) ರಡಿಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಹೊ.ಯೋ.ಪ್ರಾ/ಎಲ್.ಎ.ಓ/23/2021-22, ದಿನಾಂಕ : 16.05.2022**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಸಬಾ ಹೋಬಳಿ, ಆಲಪ್ಪನಹಳ್ಳಿ ಗ್ರಾಮದ ಸ. ನಂ. 1/6 ರಲ್ಲಿನ 01 ಗುಂಟೆ, ಸ.ನಂ. 1/12 ರಲ್ಲಿನ 05 1/2 ಗುಂಟೆ, ಸ.ನಂ. 1/13 ರಲ್ಲಿನ 05 1/2 ಗುಂಟೆ, ಸ.ನಂ. 96/1 ರಲ್ಲಿನ 01 ಎಕರೆ 11 1/2 ಗುಂಟೆ, ಸ.ನಂ. 100/2 ರಲ್ಲಿನ 08 ಗುಂಟೆ, ಸ.ನಂ. 101/1 ರಲ್ಲಿನ 09 ಗುಂಟೆ, ಸ.ನಂ. 101/2 ರಲ್ಲಿನ 05 ಗುಂಟೆ, ಸ.ನಂ. 102/2 ರಲ್ಲಿನ 02 ಗುಂಟೆ ಮತ್ತು ಶಂಕಣೀಪುರ ಗ್ರಾಮದ ಸ.ನಂ. 25 ರಲ್ಲಿನ 09 ಗುಂಟೆ, ಸ.ನಂ. 26/4 ರಲ್ಲಿನ 37 1/2 ಗುಂಟೆ, ಸ.ನಂ. 26/12 ರಲ್ಲಿನ 01 1/2 ಗುಂಟೆ ಸ.ನಂ. 26/13 ರಲ್ಲಿನ 13 1/2 ಗುಂಟೆ, ಸ.ನಂ. 26/15 ರಲ್ಲಿನ 17 ಗುಂಟೆ, ಸ.ನಂ. 32/2 ರಲ್ಲಿನ 37 ಗುಂಟೆ, ಸ.ನಂ. 32/3 ರಲ್ಲಿನ 09 1/4 ಗುಂಟೆ, ಸ.ನಂ. 32/4 ರಲ್ಲಿನ 37 ಗುಂಟೆ, ಸ.ನಂ. 32/6 ರಲ್ಲಿನ 09 1/4 ಗುಂಟೆ, ಸ.ನಂ. 32/7 ರಲ್ಲಿನ 09 1/4 ಗುಂಟೆ, ಸ.ನಂ. 32/8 ರಲ್ಲಿನ 09 1/4 ಗುಂಟೆ, ಸ.ನಂ. 34/2 ರಲ್ಲಿನ 09 ಗುಂಟೆ, ಸ.ನಂ. 34/3 ರಲ್ಲಿನ 09 3/4 ಗುಂಟೆ, ಸ.ನಂ. 34/4 ರಲ್ಲಿನ 01 ಎಕರೆ 04 ಗುಂಟೆ, ಸ.ನಂ. 34/5 ರಲ್ಲಿನ 38 ಗುಂಟೆ, ಸ.ನಂ 34/8 ರಲ್ಲಿನ 03 1/4 ಗುಂಟೆ ಒಟ್ಟು 09 ಎಕರೆ 21 ಗುಂಟೆ (10 3/4 ಗುಂಟೆ 'ಬಿ' ಖರಾಬನ್ನು ಹೊರತು ಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2ಎ) ರನ್ವಯ ವಿನ್ಯಾಸ ನಕ್ಷೆಯನ್ನು ಭೌತಿಕವಾಗಿ ಜಮೀನಿನ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸಲು ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, **"ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ"** ನೀಡಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ನೋಂದಣಿ ಮಾಡಿಕೊಂಡ ನಂತರವೇ ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯ ನಿರ್ಮಾಣದ ವ್ಯವಹಾರದ ಕುರಿತು ಜಾಹೀರಾತು ನೀಡಬಹುದು ಹಾಗೂ ನಿವೇಶನ ಮಾರಾಟ ಸಂಬಂಧ ಮುಂಗಡ ಒಪ್ಪಂದ ಕರಾರನ್ನು ಮಾಡಿಕೊಳ್ಳಬಹುದು.
3. ಈ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಯಾವುದೇ ನಿವೇಶನಗಳನ್ನು ಬಿಡುಗಡೆ ಮಾಡಿರುವುದಿಲ್ಲ.
4. ತಾತ್ಕಾಲಿಕವಾಗಿ ಅನುಮೋದನೆಯಾದ ವಸತಿ ವಿನ್ಯಾಸದಲ್ಲಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದು. ಅಲ್ಲಿಯವರೆಗೆ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ.

OM

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./23/2021-22 ದಿನಾಂಕ: 16.05.2022

5. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಠ ಬಳಕೆಗೆ ಮಾತ್ರ ಅಭಿವೃದ್ಧಿ ಪಡಿಸತಕ್ಕದ್ದು. ಬದಲಾವಣೆ ಪ್ರಸ್ತಾಪಿಸಿದಲ್ಲಿ ಚಾಲ್ತಿಯಲ್ಲಿರುವ ಶುಲ್ಕ ಹಾಗೂ ನಿಯಮಗಳು ಅನ್ವಯವಾಗುತ್ತವೆ.
6. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡ-ಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಇಕ್ಕೆಲಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
7. ಅನುಮೋದಿತ ವಿನ್ಯಾಸದಲ್ಲಿ ಮಳೆ ನೀರು ಕೊಯ್ಲಿಗಾಗಿ ಮತ್ತು ಅಂತರ್ ಜಲವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
8. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
9. ಈ ಅನುಮೋದನೆಯನ್ನು ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2ಎ) ರಡಿಯಲ್ಲಿ ನೀಡಿರುವುದರಿಂದ, ಈ ಅನುಮೋದನೆಯನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಂಬಂಧ ಉಪಯೋಗಿಸಲು ಬರುವುದಿಲ್ಲ.
10. ತಾಲ್ಲೂಕು ಭೂಮಾಪಕರು ತಯಾರಿಸಲಾದ ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಗೆ ಅನುಗುಣವಾಗಿ ಆಕಾರ ಹಾಗೂ ವಿಸ್ತೀರ್ಣಕ್ಕೆ ಅನುಗುಣವಾಗಿ ಈ ವಸತಿ ವಿನ್ಯಾಸವನ್ನು ತಯಾರಿಸಿ ಅನುಮೋದಿಸಲಾಗಿದೆ.
11. **ಪ್ರಸ್ತಾಪಿತ ವಸತಿ ವಿನ್ಯಾಸದ ಪ್ರದೇಶದ ಜಮೀನಿನಲ್ಲಿ ನಿರ್ಮಿಸಲಾಗುವ ಮಳೆ ನೀರು ಚರಂಡಿಗಳನ್ನು ಮುಚ್ಚದಂತೆ ಮುಕ್ತವಾಗಿಟ್ಟು ನಿರ್ಮಾಣ ಮಾಡತಕ್ಕದ್ದು. ಕೊಳಚೆ ನೀರನ್ನು ಮಳೆ ನೀರುಚರಂಡಿಗೆ ಬಿಡದಂತೆಕ್ರಮ ವಹಿಸತಕ್ಕದ್ದು.**
12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆಯು ಇಲ್ಲದೇ ತಂತಾನೇ ರದ್ದುಗೊಳ್ಳುತ್ತದೆ.
13. ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಪ್ರಾಧಿಕಾರವು ಅನುಮೋದಿಸಿರುವ ತಾತ್ಕಾಲಿಕ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.
14. ಸರ್ಕಾರಿ ಖರಾಬು ಇದ್ದಲ್ಲಿ, ಸದರಿ ಪ್ರದೇಶವನ್ನು ಒತ್ತುವರಿ ಮಾಡದೆ ಹಾಗೇ ಮೀಸಲಿರಿಸಿ ಸಂರಕ್ಷಿಸತಕ್ಕದ್ದು ಹಾಗೂ ಸ್ಥಳೀಯ ಸಂಸ್ಥೆಗಳು ವಿಧಿಸುವ ಷರತ್ತುಗಳನ್ನು ಪಾಲಿಸತಕ್ಕದ್ದು.
15. ರಾಜಕಾಲುವೆಯನ್ನು ಮುಚ್ಚದಂತೆ ಮತ್ತು ರಾಜ ಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.
16. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ / ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಮತ್ತು ರಾಜ ಕಾಲುವೆಗಳು ಹೂಳು ತುಂಬದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.

17. ಸದರಿ ಬಡಾವಣೆಯಲ್ಲಿನ ಒಳಚರಂಡಿ ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರ ಸಹಮತದೊಂದಿಗೆ ಅಭಿವೃದ್ಧಿ ಪಡಿಸಿ ನಂತರ ಸದರಿ ಇಲಾಖೆಯಿಂದ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.
18. ಸದರಿ ಬಡಾವಣೆಯಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯವನ್ನು ಸೂಕ್ತವಾದ ರೀತಿಯಲ್ಲಿ ಸಂಗ್ರಹಿಸುವ ಸಂಬಂಧ ಖಾಸಗಿ ಪರಿಸರ ಅಭಿಯಂತರರ ಮೇಲ್ವಿಚಾರಣೆಯೊಂದಿಗೆ ಸೆಪ್ಟಿಕ್ ಟ್ಯಾಂಕ್ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಬಗ್ಗೆ ಅವರಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
19. ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಸ್ಥಳೀಯ ಸಂಸ್ಥೆ ಕಾಯ್ದೆಯಡಿ **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಬಳಹಳ್ಳಿ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು** ರವರ ವತಿಯಿಂದ ಪರವಾನಗಿ ಪಡೆಯತಕ್ಕದ್ದು.
20. ಈ ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ನೀಡಿರುವ ರೆವಿನ್ಯೂ ದಾಖಲೆಗಳನ್ನು ಆಧರಿಸಿ ತಯಾರಿಸಲಾಗಿದೆ. ಈ ಜಮೀನಿನ ಮಾಲೀಕತ್ವ ಮತ್ತು ಜಮೀನಿನ ಗಡಿಗಳಿಗೆ ಸಂಬಂಧಪಟ್ಟಂತೆ ಮತ್ತು ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
21. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೆ ಕೂಡಲೇ ರದ್ದಾಗುವುದು ಹಾಗೂ ಕೆಟಿಸಿಪಿ ಕಾಯ್ದೆ 1961 ರ ಕಲಂ 17(4) ಮತ್ತು 76(ಓ) ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

**ಪ್ರತಿಗಳನ್ನು:**

1. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2ನೇ ಮಹಡಿ, ಸಿಲ್ವರ್ ಜ್ಯುಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಬೆಂಗಳೂರು-27 ಇವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಒಂದು ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂಬಳಹಳ್ಳಿ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ಇವರಿಗೆ ವಿನ್ಯಾಸದ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. **ಶ್ರೀ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ ಮತ್ತು ಶ್ರೀಮತಿ ಕೀರ್ತಿ ಮುಸನೂರಿ ಕೋಂ ಶಿವರಾಮಕೃಷ್ಣ ಪ್ರಸಾದ್ ಮುಸನೂರಿ,** ಮೆ॥ ಎಂ.1 ಹೌಸಿಂಗ್ ಎಲ್.ಎಲ್.ಪಿ, ಸ.ನಂ. 26/5, 27/2, 29/2, ಶಂಕಣೀಪುರ, ಎನ್.ಹೆಚ್-207, ಹೊಸಕೋಟೆ, ಬೆಂಗಳೂರು-562 114 ಇವರಿಗೆ ಮಾಹಿತಿಗಾಗಿ ವಿನ್ಯಾಸ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.
4. ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.